## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1206 (1415) |
| ಸದಸ್ಯರ ಹೆಸರು | ಶ್ರೀ ಎಸ್.ನಾಗಾರಾಜ್ |
| ಉತ್ತರಿಸುವ ದಿನಾಂಕ: | 18-03-2020 |
| ಉತ್ತರಿಸುವವರು | ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ | ಬಿಳಿಗಿರಿ ರಂಗನ ಬೆಟ್ಟ ದೇವಾಲಯ ನಿರ್ಮಾಣದ ಕಾಮಗಾರಿಗಳು ಪ್ರಾರಂಭವಾಗಿದ್ದು ಯಾವಾಗ ಇದುವರೆಗೆ ಪೂರ್ಣವಾಗಿರುವ ಕಾಮಗಾರಿಗಳು ಯಾವುವು; ಇನ್ನು ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳಿಗೆ ಮಂಜೂರಾಗಿದ್ದ ಅನುದಾನ ಎಷ್ಟು; ಎಷ್ಟು ಹಣ ಇದುವರೆಗೆ ಖರ್ಚಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು) ಖಾಸಗಿ ವ್ಯಕ್ತಿಗಳು ಯಾವುದಾದರೂ ಕಾಮಗಾರಿಗಳನ್ನು ಮಾಡಿಸಿಕೊಟ್ಟಿರುವರೇ ಅಥವಾ ಮಾಡಿಸಿಕೊಡಲು ಮುಂದೆ ಬಂದಿರುವರೆ; ಅವರಿಗೆ ಕಾಮಗಾರಿಗಳ ನಿರ್ಮಾಣವನ್ನು ವಹಿಸಲಾಗಿದೆಯೇ; | ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ 'ಎ' ಶ್ರೇಣಿಯ ಅಧಿಸೂಚಿತ ಸಂಸ್ಥೆಯಾಗಿರುತ್ತದೆ.<br><br>ಈ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಯನ್ನು 2017ರ ಏಪ್ರಿಲ್‌ನಲ್ಲಿ ರಾಜ್ಯ ಪ್ರಾಚ್ಯವಸ್ತು ಇಲಾಖಾ ವತಿಯಿಂದ ರೂ.240.00 ಲಕ್ಷಗಳ ಅನುದಾನದಲ್ಲಿ ಪ್ರಾರಂಭಿಸಲಾಗಿದ್ದು, ದೇವಾಲಯದ ಜೀರ್ಣೋದ್ಧಾರ ಕಾಮಗಾರಿಯು ಪೂರ್ಣಗೊಂಡು, ರೂ.240.00 ಲಕ್ಷಗಳ ಅನುದಾನವು ಕಾಮಗಾರಿಗೆ ಖರ್ಚಾಗಿರುತ್ತದೆ.<br><br>ಆದರೆ, ದೇವಾಲಯದ ಸುತ್ತ ನೆಲಹಾಸು ಕಾಮಗಾರಿಯು ಬಾಕಿ ಇದ್ದು, ರೂ.100.00ಲಕ್ಷ ಅನುದಾನವು ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾಗಿದ್ದು, ಕಾಮಗಾರಿಯು ಪ್ರಾರಂಭಿಸಬೇಕಾಗಿರುತ್ತದೆ.<br><br>ದಾನಿಗಳಿಂದ ಈ ದೇವಾಲಯದ ಪಾಕಶಾಲೆ, ಯಾಗಶಾಲೆ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಪಾಕಶಾಲೆ ಕಾಮಗಾರಿಯು ಪೂರ್ಣವಾಗಿದ್ದು, ಯಾಗಶಾಲೆ ಕಾಮಗಾರಿಯು ಶೇಕಡ 60%ರಷ್ಟು ಪ್ರಗತಿಯಲ್ಲಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. |
| ಆ | ಕಾಮಗಾರಿಗಳ ವಿಳಂಬದಿಂದ ಜನವರಿ-16 ರಂದು ನಡೆಯಬೇಕಾಗಿದ್ದ ಚಿಕ್ಕ ಜಾತ್ರೆ ರದ್ದಾಗಿದೆಯೇ; ಮೇ 27 ರಿಂದ ಜೂನ್ 1 ರಂದು ಪುನರ್ ಪ್ರತಿಷ್ಠಾಪನೆಗೆ ಸೂಕ್ತ ಕಾಲ ಎಂದು ತೀರ್ಮಾನಿಸಲಾಗಿದೆಯೇ; ಅದರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೇ; ಇನ್ನೂ ಎಷ್ಟು ಅನುದಾನದ ಅಗತ್ಯ ಇದೆ; (ವಿವರ ಒದಗಿಸುವುದು) | ಈ ದೇವಾಲಯದ ಕಾಮಗಾರಿಗಳ ಹಿನ್ನೆಲೆಯಲ್ಲಿ ದೇವಾಲಯದ ಪ್ರಾಕಾರದ ಸುತ್ತ ಸೂಕ್ತ ಸ್ಥಳಾವಕಾಶ ಇಲ್ಲದೆ ಇರುವುದರಿಂದ ದೇವಾಲಯದ ಪುನರ್ ಪ್ರತಿಷ್ಠಾಪನೆ ಆಗುವವರೆಗೂ ತಾತ್ಕಾಲಿಕವಾಗಿ ಚಿಕ್ಕ ಜಾತ್ರೆ ಉತ್ಸವವನ್ನು ಸ್ಥಗಿತಗೊಳಿಸಲಾಗಿರುತ್ತದೆ. ಮೇ 27 ರಿಂದ ಜೂನ್ 1 ರಂದು ಪುನರ್ ಪ್ರತಿಷ್ಠಾಪನೆಗೆ ಸೂಕ್ತ ಕಾಲ ಎಂದು ದೇವಾಲಯದ ಆಗಮ ಪಂಡಿತರು ವರದಿ ನೀಡಿದ್ದು, ಪರಿಶೀಲನೆಯಲ್ಲಿರುತ್ತದೆ. ಮೇಲಿನ (ಅ) ಭಾಗದಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಏಪ್ರಿಲ್ ಅಂತ್ಯದ ಒಳಗೆ ಪೂರ್ಣಗೊಳಿಸಲಾಗುವುದು ಹಾಗೂ ಈ ದೇವಾಲಯಕ್ಕೆ ಹೆಚ್ಚುವರಿ ಅನುದಾನ ರೂ.1500.00 ಲಕ್ಷಗಳು ಬಿಡುಗಡೆಯಾದರೆ, ಶ್ರೀ ಕ್ಷೇತ್ರದ ಅಭಿವೃದ್ಧಿ ಹಾಗೂ ಬಿಳಿಗಿರಿರಂಗನಬೆಟ್ಟವನ್ನು ಪ್ರವಾಸಿ ತಾಣ ಮತ್ತು ಯಾತ್ರಾಸ್ಥಳವಾಗಿ ಮಾಡಬಹುದಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. |

| | | |
|---|---|---|
| ಇ | ಚಾಮರಾಜನಗರ ಚಾಮರಾಜೇಶ್ವರ ರಥದ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ; ಇದು ಯಾವಾಗ ಪೂರ್ಣಗೊಳ್ಳುತ್ತದೆ; ರಥೋತ್ಸವ ರದ್ದಾಗಿ ಭಕ್ತ ಜನರ ಧಾರ್ಮಿಕ ಭಾವನೆಗಳಿಗೆ ಕುಂದು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೂಡಲೇ ರಥ ನಿರ್ಮಾಣ ಕಾಮಗಾರಿಗಳನ್ನು ಮುಗಿಸಿ, ರಥೋತ್ಸವ ನಡೆಸಲು ಅನುಕೂಲ ಮಾಡಿಕೊಡಲಾಗುವುದೇ? | ಚಾಮರಾಜನಗರದ ಶ್ರೀ ಚಾಮರಾಜೇಶ್ವರಸ್ವಾಮಿ ರಥದ ನಿರ್ಮಾಣ ಕಾಮಗಾರಿಯನ್ನು Expression Of Intrest ಅಡಿಯಲ್ಲಿ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ರಥಶಿಲ್ಪಿ ಶ್ರೀ ಬಿ.ಎಸ್. ಬಡಿಗೇರ್ & ಸನ್ಸ್ (ಪ್ರೊ) (ಶಿವಕುಮಾರ್ ಬಿ. ಬಡಿಗೇರ) ರವರಿಗೆ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಚಾಮರಾಜನಗರ ವಿಭಾಗ, ಚಾಮರಾಜನಗರ ರವರ ಕಛೇರಿಯ ಟೆಂಡರ್ ಕರಾರು ಪತ್ರ ಸಂಖ್ಯೆ:407/2018-19, ದಿನಾಂಕ:28.02.2019 ರನ್ವಯ ಕಾರ್ಯಾದೇಶ ನೀಡಲಾಗಿದೆ. ಕರಾರಿನಂತೆ ಕಾಮಗಾರಿಯು ದಿನಾಂಕ: 28.02.2020 ರಂದು ಪೂರ್ಣಗೊಳ್ಳಬೇಕಾಗಿತ್ತು. ಆದರೆ ರಥ ನಿರ್ಮಾಣಕ್ಕೆ ಯೋಗ್ಯ ಮರ ಸಿಗಲಿಲ್ಲವಾದ್ದರಿಂದ ವಿಳಂಬವಾಗಿದೆ. ಈಗ ರಥಕ್ಕೆ ಬೇಕಾಗಿರುವ ಮರವನ್ನು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸರ್ಕಾರಿ ಮರವಟ್ಟು ಸಂಗ್ರಹಾಲಯ ಕಿರುವತ್ತಿ ರವರಲ್ಲಿ ಮರವನ್ನು ದಿನಾಂಕ:31.12.2019 ರಂದು ಖರೀದಿಸಲಾಗಿದೆ. ಮರವನ್ನು ಸಾಮಿಲ್ಲಿನಲ್ಲಿ ಅಳತೆಗನುಗುಣವಾಗಿ ದಿನಾಂಕ:15.02.2020 ರಂದು ಕೊರೆಸಲಾಗಿದ್ದು. ಒಣಗಲು ಇಡಲಾಗಿದೆ. ರಥ ನಿರ್ಮಾಣವನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮಕೈಗೊಂಡು ರಥೋತ್ಸವ ನಡೆಸಲು ಅನುಕೂಲ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. |

(ಸಂಖ್ಯೆ:ಕಂಇ 60 ಮುಸಪ್ರ 2020)

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.